ಸೇರಿಕೊ (ಗಾಳಿ ಬಿಟ್ಟೈತೆ ತಂಗಿ ತೂರಿಕೊ/ ಸಂತೆ ಗದ್ದಲದೊಳಗ ಸೇರಿಕೊ), ಸುಳ್ಳೆ ನಗತಾಳ (ಸುಳ್ಳೆ ನಗುತಾಳ ತಮ್ಮ ಸಣ್ಣ ಹುಡುಗಿ/ ಹೊಳ್ಳೊಳ್ಳಿ ನೋಡತಾಳ ದೊಡ್ಡ ಹುಡುಗಿ), ಜೋಳಿಗಿ ವಳಗೊಂದು ಜ್ವಾಳದ ತೆನಿ ಕಥಿ (ಗಿಲಿಗಿಲಿ ಕಿರಿಗೆಜ್ಜೆ ಮಾದೇವಿ/ ನೀನು ಗಿರಿಕೇಲಿ ಹಗ್ಗಾವು ಮಾದೇವಿ) ಕವಿತೆಗಳಲ್ಲಿ ಪ್ರಯತ್ನಿಸಿದ್ದೇನೆ. ಉದಾಹರಣೆಗೆ 'ಬಾನು ನೀವೆ ಹಂಚಿಕೊಳ್ಳಿ' ಗೀತೆಯ ಸಾಲು ಗಮನಿಸಿ:

ಎತ್ತರೆತ್ತರ ಬಾನಿನೆತ್ತರ ಗುಡ್ಡಕ ಕರಿ ಕಲ್ಲು
ಗಿಡದ ಬುಡಕ ನೆಡು ಹುಲ್ಲು
ಅಗಲ ಅಗಲ ಅದು ಮಾತಿನ ಹಗಲ
ಸುಮ್ಮನೆ ಕಿರಿ ಹಲ್ಲು
ಮುಗಿಲ ಮುಟ್ಟಿತು ಬರಿ ಸೊಲ್ಲು
ಗಿಳಿ ಬಾರವು ಗೂಬೆ ಕೂಡವು
ಉಕ್ಕಿನ ಕೊಂಬೆಯಲಿ
ಪೊಟರಿನ ಗುಟುರು ಕೇಳದಿಲ್ಲಿ
ಕಾಯಿ ಇದ್ದವು ಹಣ್ಣು ಮೇದವು
ಊರ ಬದುವಿನ್ಯಾಗ
ಯಾರೊ ನದುರು ಬಿಟ್ಟರೀಗ

ಈ ಮೇಲಿನ ಸಾಲುಗಳನ್ನು ಬರೆಯುವಾಗ ನನಗೆ ಬೇಂದ್ರೆ ಮತ್ತು ಕಂಬಾರರ ಭೂತ ಹೊಕ್ಕಂತ ಸ್ಥಿತಿಯಲ್ಲಿದ್ದೆ. ಮುಕ್ತ ಛಂದಸ್ಸಿನಿಂದ ಬಿಡಿಸಿಕೊಂಡು, ಹೀಗೆ ಹೊರಳು ದಾರಿಗೆ ನಡದಾಗ, ಈ ತರಹದ ರಚನೆಗಳ ಮೂಲಕ ಒಂದರ್ಥದಲ್ಲಿ ನನ್ನ ಕಾವ್ಯ ಸಾಮರ್ಥ್ಯದ ಅರಿವು ಮತ್ತು ಮಿತಿಗಳನ್ನು ಕಂಡುಕೊಂಡೆ. ಇನ್ನು ಗೇಯತೆ ಬಗ್ಗೆ ಹೇಳುತ್ತ 'ಜುಲುಮೆ' ಸಂಕಲನದ ಮುನ್ನುಡಿಯಲ್ಲಿ ಕವಿ ಕೆ.ವಿ. ತಿರುಮಲೇಶರು ಹೀಗೆ ಬರೆಯುತ್ತಾರೆ: "ಕೇವಲ 'ಗೇಯತೆ'ಯಿದೆ ಎಂಬ ಕಾರಣಕ್ಕೋಸ್ಕರ ಒಂದು ಕವಿತೆ ಉತ್ತಮ ಎನಿಸುವುದಿಲ್ಲ; ಉತ್ತಮವೆನಿಸುವುದಕ್ಕೆ ಅದರ ಸಾಹಿತ್ಯ ಸತ್ವ ಕೂಡಾ ಕಾರಣವಾಗುತ್ತದೆ ಎಂದರೆ ಅದರ ಅರ್ಥ, ವಿಚಾರ, ಭಾವನೆ, ಆಶಯ, ಔಚಿತ್ಯ, ಪ್ರಸ್ತುತತೆ ಮುಂತಾದುವು ಸಾಧಾರಣವಾಗಿ ಗೇಯತೆ ಅರ್ಥವನ್ನು (ವೈಚಾರಿಕತೆಯನ್ನು) ಮರೆಸುತ್ತದೆ ಎಂಬ ಆರೋಪವಿದೆಯಾದರೆ ಹಾಗಾಗಬೇಕೆಂದೇನೂ ಇಲ್ಲ. ಬೇಂದ್ರೆಯವರ 'ಕುರುಡು ಕಾಂಚಾಣ'ವಾಗಲಿ, ಅದಕ್ಕೂ ಹಿಂದೆ ಬಂದ ಪುರಂದರ ದಾಸರ 'ದುಗ್ಗಾಣಿ ಬಲು ಕೆಟ್ಟದು' ಎಂಬ ರಚನೆಯಾಗಲಿ ಗೇಯವಾಗಿದ್ದೂ ತಮ್ಮ ಅರ್ಥವಂತಿಕೆಯನ್ನು ಕಳೆದುಕೊಳ್ಳುವುದಿಲ್ಲ. ಶಿಶುನಾಳ ಷರೀಫರ ಅನೇಕ ಕೃತಿಗಳು ಕೂಡ ಇಂಥವು: ಅರ್ಥ ಮತ್ತು ಲಯದಿಂದ ಒಡಗೂಡಿದಂಥವು." ಹಾಗಾಗಿ ಕವಿತೆಯೊಂದು ಸಮೂಹವನ್ನು ತಲುಪಬೇಕಾದ ಅಗತ್ಯವಿರುವ ಇಂದಿನ ಈ ಸಂಕರದ ದಿನಗಳಲ್ಲಿ ಮತ್ತೆ ನಾವು ಪ್ರಯೋಗ ಅಂತಲಾದರೂ ಹಾಡುಗವಿತೆಗೆ ಮರಳುವ ಅಗತ್ಯವಿದೆ.

**ರಮೇಶ ಅರೋಲಿ**

ರಾಯಚೂರಿನ ಅಸ್ಕಿಹಾಳದವರು. ಓದಿದ್ದು ಪತ್ರಿಕೋದ್ಯಮ. ದೆಹಲಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ. 'ಎಳೆಯ ಪಾಪದ ಹೆಸರು ನಿಮ್ಮಿಚ್ಛೆಯಂತೆ ಇಟ್ಟುಕೊಳ್ಳಿ', 'ಜುಲುಮೆ' ಅವರ ಕವನ ಸಂಕಲನಗಳು.